

## ಸಾವಿರ ಬಾವಿಗಳ ಸರದಾರ

ಹೈದ್ರಾಬಾದ್ ಕರ್ನಾಟಕದ ರಾಯಚೂರು ನಿಜಾಮರ ಆಡಳಿತಕ್ಕೆ ಒಳಪಟ್ಟಿತ್ತು ಎಂಬುದು ನಮಗೆ ತಿಳಿದ ವಿಷಯ. ಅಂದಿನ ಅಂದರೆ ಕ್ರಿ. ಶ. 1320 ರಲ್ಲಿ ತೀವ್ರ ಬರಗಾಲ ಬಂದಿತ್ತು. ಪರಿಣಾಮ ನೀರಿನ ಹಾಹಾಕಾರ ಎಲ್ಲೆಡೆ ಉಂಟಾಗಿತ್ತು. ಈ ಸಂದರ್ಭದಲ್ಲಿ ನಿಜಾಂ ಸರ್ಕಾರ ಭೂಗರ್ಭ ಶಾಸ್ತ್ರಜ್ಞ ಕ್ಯಾಪ್ಟನ್ ಲಿಯೋನಾರ್ಡ್‌ಮನ್ ಎಂಬುವವರನ್ನು ನೀರಿನ ಸಮಸ್ಯೆ ಬಗೆಹರಿಸಲು ನೇಮಿಸಿತು. ನಂತರ  ಮನ್ ಅವರು ರಾಯಚೂರು ಜಿಲ್ಲೆಯಾದ್ಯಂತ ಸಮೀಕ್ಷೆ ನಡೆಸಿ ಸಾವಿರಕ್ಕೂ ಅಧಿಕ ತ್ರಿಕೋನಕಾರದಿಂದ ದಶಕೋನಾಕೃತಿ ಆಕಾರದವರೆಗೂ ಬಾವಿಗಳನ್ನು ತೋಡಿಸಿದರು. ನೀರಿನ ಬವಣೆಯನ್ನು ನೀಗಿಸಿದರು.

ಮೂಲತಃ ಇಂಗ್ಲೆಂಡಿನವರಾದ ಲಿಯೋನಾರ್ಡ್‌ಮನ್ ಅವರು ನೀರಿನ ಮಿತವ್ಯಯ ಮಾಡುವ ಕುರಿತು ಜನ ಜಾಗೃತಿ ಮೂಡಿಸಿದರು. ಮನ್ ಅವರ ಸಮಾಧಿಯನ್ನು ರಾಯಚೂರು ಜಿಲ್ಲೆಯ ಲಿಂಗಸ್ಗೂರು ತಾಲ್ಲೂಕಿನಲ್ಲಿ ಕಾಣಬಹುದು.

**-ಈರಣ್ಣ ಬೆಂಗಾಲಿ, ರಾಯಚೂರು**

## ಮಣ್ಣಿನ ಬಾನಿ

ಮಲೆನಾಡಿನಲ್ಲಿ ಇನ್ನೇನು ಅಡಿಕೆ ಕೊಯ್ಲಿನ ಭರಾಟೆ ಶುರುವಾಗುತ್ತದೆ. ಹಸಿ ಅಡಿಕೆ ಬೇಯಿಸಿದ ಬಳಿಕ ಇರುವ ತೊಗರು ರಸವನ್ನು ಸಂಗ್ರಹಿಸಿಡಲು ಈ ಮಣ್ಣಿನ ಬಾನಿ (ಡ್ರಮ್) ಯನ್ನು ಬಳಸುತ್ತಾರೆ. ಇದರಲ್ಲಿ ಸಂಗ್ರಹಿಸಿದರೆ ತಿಳಿಯಾದ ತೊಗರು ಚೆನ್ನಾಗಿ ಜಿಗುಟಾಗುತ್ತದೆ. ಇದಕ್ಕೆ ಬಣ್ಣ ಕದಡಿ ಅಡಿಕೆಗೆ ಬಣ್ಣ ಹಾಕಲು ಬಳಸುತ್ತಾರೆ. ಇದನ್ನು ಚೆಲ್ಲದೇ ಹಾಗೇ ಇಟ್ಟರೆ ಇಂತಹ ಒಳ್ಳೆಯ ತೊಗರಿಗೆ ಸೂಕ್ತ ಬೆಲೆಯೂ ಸಿಗುತ್ತದೆ.

ಈಗಿನ ಪ್ಲಾಸ್ಟಿಕ್ ಡ್ರಮ್‌ಗಳ ಭರಾಟೆಯಲ್ಲಿ ಈ ಬಗೆಯ ಮಣ್ಣಿನ ಬಾನಿಗಳನ್ನು ಬಳಸುವವರೂ, ತಯಾರಿಸುವವರೂ ವಿರಳ. ಆದರೂ ಅಡಿಕೆ ಕೊಯ್ಲಿನಲ್ಲಿ ಅಲ್ಲಲ್ಲಿ ಅಟ್ಟದಲ್ಲಿರುವ ಮಣ್ಣಿನ ಬಾನಿಗಳು ಕೆಳಗಿಳಿದು ಕಾಣಸಿಗುತ್ತವೆ ಅನ್ನುವುದೇ ವಿಶೇಷ!

**-ಅನು ಬೊಮ್ನಳ್ಳಿ, ಶಿರಸಿ**





## ಬೆಳ್ಳಿ ಗಿಲಕಿ

ನನ್ನ ಸ್ನೇಹಿತೆ ಪಾರ್ವತಿ ತಮ್ಮ ಮೊಮ್ಮಗುವಿಗೆ ಆಡಲು ಕೊಟ್ಟ ಬೆಳ್ಳಿ ಗಿಲಕಿ ಮೂರು ತಲೆಮಾರಿನದ್ದು. ಗಿಲಕಿಯೊಳಗಿನ ಬೆಳ್ಳಿ ಗುಂಡು ಕೈ ಕುಲುಕಿದಾಗ ಕಿಣ–ಕಿಣ ಶಬ್ದ ಮಾಡಿದರೆ ಹಿಡಿಯಲ್ಲಿನ ಪೀಪಿ ಊದಿದರೆ ಮಗುವಿನ ಮುಖ ಅರಳುತ್ತದೆ. ಬರೀ ಪ್ಲಾಸ್ಟಿಕ್, ಸ್ಟೀಲ್ ಗಿಲಕಿಗಳನ್ನು ನೋಡಿದವರಿಗೆ ಇದು ವಿಶೇಷ.

**-ಸ್ಮಿತಾ ಎಸ್.ಎಂ., ಶಿವಮೊಗ್ಗ**